1	2	3	4	5	6	7
3.	ದಾನುಬಾಳು ವೇಚರುಂದ ರಸ್ತೆ 10.60 ರಿಂದ 12.60 ಕಿ.ಮೀವರೆಗೆ ಮರು ಡಾಂಬರು.	"	3.50	-	4.25	4.25
4.	ಚಂಗದಹಳ್ಳಿ ಮಾರ್ಗ ಬಾರ್ಡರ್ ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರು.	"	6.00	3.09	4.14	7.23
5.	ಸಕಲೇಶಪುರ ವಿರಾಜಪೇಟೆ ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರು	"	5.00	-	5.74	5.74
	ಆಲೂರು ತಾಲ್ಲೂಕು					
6.	ಬನವಾಸಿ ಯಸಳೂರು ರಸ್ತೆಯ ಕಿಮೀ. 16.80 ರಿಂದ 19.00 ಕಿ.ಮೀವರೆಗೆ ಡಾಂಬರು.	ಆಲೂರು	4.00	4.51(-)	0.10	4.32
7.	ಆಲೂರು ಕುದದೂರು ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರು.	"	2.00	0.53	-	0.53
8.	ಆಲೂರು ಕಣವಳ್ಳ ಮಗ್ಗೆ ರಸ್ತೆಯು ಆಯ್ದ ಭಾಗಗಳಲ್ಲಿ ಡಾಂಬರೀಕರಣ.	"	2.00	-	-	-
			30.00	**8.13**	**22.41**	**30.54**

ಪಿಡಬ್ಲ್ಯೂಡಿ 105 ಸಿಕ್ಯೂಎನ್ 97

ರಸ್ತೆಗಳ ಅಭಿವೃದ್ಧಿಗೆ ನಬಾರ್ಡ್ ಸಂಸ್ಥೆಯಿಂದ ನೆರವು

2043 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಗಳು ಅಭಿವೃದ್ಧಿಗೆ ನಬಾರ್ಡ್ ಸಂಸ್ಥೆಯಿಂದ ಸಾಲದ ನೆರವು ದೊರಕಿದೆಯೇ?

ಆ) ದೊರಕಿದಲ್ಲಿ ಎಷ್ಟು ದೊರಕಿದೆ?

ಇ) ಇದರಲ್ಲಿ ಹಾಸನ ಜಿಲ್ಲೆಗೆ ಎಷ್ಟು ಬಂದಿದೆ?

ಈ) ಹಾಸನ ಜಿಲ್ಲೆಯಲ್ಲಿ ಯಾವ ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಉ) 1997-98 ನೇ ಸಾಲಿನಲ್ಲಿ ಈ ಯೋಜನೆಗೆ ನಿಗದಿಪಡಿಸಿರುವ ಮೊತ್ತವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) 1996-97ನೇ ಸಾಲಿನಲ್ಲಿ ನಬಾರ್ಡ್‌ನಿಂದ 28 ಕೋಟಿ ರೂ.ಗಳ ಸಾಲ ಸಹಾಯ ದೊರಕಿದೆ.

ಇ) ಹಾಸನ ಜಿಲ್ಲೆ ಕಾಮಗಾರಿಗಳಿಗೆ 10.77 ಕೋಟಿ ರೂ.ಗಳ ಸಾಲ ಸಹಾಯ ದೊರಕಿದೆ.

ಈ) ನಬಾರ್ಡ್ ಕಾಮಗಾರಿಗಳಿಗೆ ಕ್ಷೇತ್ರವಾರು ಹಣ ನಿಯೋಜಿಸಿರುವುದಿಲ್ಲ. ಕಾಮಗಾರಿಗಳು ಹಬ್ಬಿರುವ ಕ್ಷೇತ್ರಗಳ ವಿವರ ನೀಡಲಾಗಿದೆ.

1) ಸಕಲೇಶಪುರ	96.75 ಲಕ್ಷ ರೂ.ಗಳು
2) ಅರಕಲಗೂಡು	101.95 ಲಕ್ಷ ರೂ.ಗಳು
3) ಹಾಸನ	135.90 ಲಕ್ಷ ರೂ.ಗಳು
4) ಬೇಲೂರು	97.30 ಲಕ್ಷ ರೂ.ಗಳು
5) ಶ್ರವಣಬೆಳಗೊಳ	27.90 ಲಕ್ಷ ರೂ.ಗಳು
6) ಅರಸಿಕೆರೆ	63.00 ಲಕ್ಷ ರೂ.ಗಳು
7) ಗಂಡಸಿ	135.00 ಲಕ್ಷರೂ.ಗಳು
8) ಹೊಳೆನರಸೀಪುರ	399.60 ಲಕ್ಷ ರೂ.ಗಳು

ಉ) 1997- 98ನೇ ಸಾಲಿನಲ್ಲಿ ಈ ಯೋಜನೆಗೆ ಇನ್ನು ಹಣವನ್ನು ನಿಗದಿಪಡಿಸಿರುವುದಿಲ್ಲ.

ಹಾಸನ ಜಿಲ್ಲೆಯಲ್ಲಿರುವ ಪಶುವೈದ್ಯಾಲಯ, ಪಶುಚಿಕಿತ್ಸಾಲಯ ಹಾಗೂ ಪ್ರಾಥಮಿಕ ಕೇಂದ್ರಗಳು

2044 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಒಟ್ಟು ಎಷ್ಟು ಪಶು ವೈದ್ಯಾಲಯ : ಪಶುಚಿಕಿತ್ಸಾಲಯ ಮತ್ತು ಪ್ರಾಥಮಿಕ ಕೇಂದ್ರಗಳಿವೆ? (ತಾಲ್ಲೂಕುವಾರು ವಿವರ ಕೊಡುವುದು)

ಆ) ಈ ಎಲ್ಲಾ ಕೇಂದ್ರಗಳಲ್ಲಿ ಪಶುವೈದ್ಯರು ಮತ್ತು ಸಿಬ್ಬಂದಿಗಳು ಇರುವರೇ?

ಇ) ಹಾಗಿಲ್ಲದಿದ್ದಲ್ಲಿ ಯಾವಾಗ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?